Sri H. SIDDAVEERAPPA :—The Chair has specifically said that.

Mr. SPEAKER :—That will be taken up.

In the Lok Sabha 70 to 80 questions are put up for a day but hardly 4 or 5 are answered. The others go on record. In the House of Commons also though 200 questions are put up for a day but hardly 30 or 40 are answered. Others go on record. If the Hon. Members desire that all questions included in the list should be answered on the floor of the House, that could be done only if the members co-operate with the Chair.

Sri S. S. ARAKERI :—I walk out against the refusal of the Chair to permit me to put my question.

GOVERNMENT OF INDIA'S CIRCULAR ON COMMUNAL MENACE IN THE COUNTRY

207 Sri M. S. KRISHNAN (Malleswaram):—

Will the Chief Minister be pleased to state :—

(*a*) whether any circular/directive advice has been issued by the Government of India to the Government of Mysore in respect of the communal menace that is threatening the country ;

(*b*) If so, the salient features of such circular/directive/advice (a copy of such circular/directive/advice be placed on the table of the House) ;

(*c*) The steps the Government is contemplating to take in regard to the implementation of the circular/directive advice ?

Sri VEERENDRA PATIL (Chief Minister) :—

(*a*) Yes.

(*b*) They contain general instructions r garding removal of causes for communal tensions and disturbances, maintenance of communal harmony, preventive and remedial measures to be taken, public co-operation to be enlisted etc. Copies of these circulars and instructions cannot be placed on the table of the House.

(*c*) Government have been taking and will continue to take all necessary steps in this regard.

ಶ್ರೀ ಎಂ. ಎಸ್. ಕೃಷ್ಣನ್ :—(ಅ) ಪ್ರಶ್ನೆಗೆ ಉತ್ತರವಾಗಿ ಸುತ್ತೋಲೆ ಹಾಗೂ ತಿಳಿವಳಿಕೆಗಳ ಪ್ರತಿಗಳನ್ನು ಸಭೆಯ ಮುಂದೆ ಇಡಲು ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಆ ರೀತಿ ಸಭೆಯ ಮುಂದೆ ಇಡದಿರುವುದಕ್ಕೆ ಗಾಢವಾದ ಕಾರಣವೇನು?

† ಶ್ರೀ ವೀರೇಂದ್ರಪಾಟೀಲ್ :—ನಮಗೆ ಈ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಅನೇಕ ಸುತ್ತೋಲೆಗಳು ಹಾಗೂ ತಿಳಿವಳಿಕೆಗಳು ಬರುತ್ತವೆ. ಕೇಂದ್ರ ಸರ್ಕಾರಕ್ಕೂ ನಮಗೂ ಆಗುವಂತಹ ಪತ್ರ ವ್ಯವಹಾರಗಳನ್ನೆಲ್ಲಾ ಸಭೆಯ ಮುಂದಿಡುವುದಕ್ಕೆ ಸಾಧ್ಯವಿಲ್ಲ ಮಾನ್ಯ ಸದಸ್ಯರು ಇಲ್ಲಿ ಕೋಮುವಾರು ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಕೋಮುವಾರು ಗಲಾಟೆ ನಡೆದಾಗ ನಾವು ಯಾವ ರೀತಿ ಅದನ್ನು ತಡೆಯುತ್ತೇವೆ ಮತ್ತು ಆ ಬಗ್ಗೆ ಏನು ಕಾರ್ಯಕ್ರಮ ಕೈಕೊಳ್ಳುತ್ತೇವೆಂಬ ವಿವರಗಳನ್ನು ಬಯಲಿಗೆಳೆಯುವುದಕ್ಕೆ ಆಗುವುದಿಲ್ಲ. ಲಾ ಅಂಡ್ ಆರ್ಡರ್ ಮೇನ್‌ಟೀನ್ ಮಾಡುವುದು ಸರ್ಕಾರದ ಜವಾಬ್ದಾರಿಯಾದ್ದರಿಂದ ಸಮಯ ನೋಡಿಕೊಂಡು ಅದರಂತೆ ಕ್ರಮ ತೆಗೆದುಕೊಳ್ಳುತ್ತೇವೆ. ಆದ್ದರಿಂದ ಈ ವಿಚಾರದಲ್ಲಿ ಪ್ರತಿಯೊಂದು ವಿಚಾರವನ್ನು ಸಭೆಗೆ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :—ನಮ್ಮ ದೇಶದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಅನೇಕ ಕೋಮುವಾರು ಸಂಸ್ಥೆಗಳು ಇವೆ. ಆರ್.ಎಸ್.ಎಸ್ ಮತ್ತು ಜನಸಂಘಗಳಂತಹ ಸಂಸ್ಥೆಗಳು ಕೋಮುವಾರು ಗಲಭೆಗಳನ್ನು ಹಬ್ಬಿಸುತ್ತಿವೆ. ಈ ಸಂಸ್ಥೆಗಳಿಗೆ ತಾವು ರಕ್ಷಣೆ ಕೊಡುತ್ತಿರುವುದರಿಂದ ಅವುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ತಾವು ತಯಾರಿಲ್ಲದಿರುವುದು ನಿಜವೇ?

ಶ್ರೀ ವೀರೇಂದ್ರಪಾಟೀಲ್ :—ಮಾನ್ಯ ಸದಸ್ಯರು ಆರ್.ಎಸ್.ಎಸ್ ಮತ್ತು ಜನಸಂಘದ ಬಗ್ಗೆ ಏನಾದರೂ ಹೇಳಬೇಕೆಂದಿದ್ದರೆ ಈ ಸಭೆಯನ್ನೇ ಉಪಯೋಗ ಮಾಡಿಕೊಳ್ಳಬೇಕಾಗಿಲ್ಲ. ಮುಖ್ಯ ಮಂತ್ರಿಯಾಗಿ ನನಗೆ ಜನಸಂಘ ಅಥವಾ ಆರ್.ಎಸ್.ಎಸ್ ಬಗ್ಗೆ ಪ್ರೇಮವೂ ಇಲ್ಲ, ಲೋಪವೂ ಇಲ್ಲ. ಯಾವ ಸಂಸ್ಥೆಯ ಬಗ್ಗೆಯೂ ಕೂಡ ನನಗೆ ವೈರತ್ವ ಇಲ್ಲ. ಯಾವುದಾದರು ಒಂದು ಸಂಸ್ಥೆ ಕೋಮುವಾರು ಗಲಭೆಯುಂಟುಮಾಡಿ ಲಾ ಅಂಡ್ ಆರ್ಡರ್ ಬಗ್ಗೆ ಭಂಗ ತಂದರೆ ಕಾನೂನು ಪ್ರಕಾರ ಅಂತಹ ಸಂಸ್ಥೆಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇವೆ.

ಶ್ರೀ ಭೋಳಾರಘುರಾಮಶೆಟ್ಟಿ :—ಕೋಮುವಾರು ಗಲಭೆ ನಡೆದಾಗ ಮತ್ತು ರಾಷ್ಟ್ರಘಾತುಕ ಘಟನೆ ನಡೆದಾಗ ಆ ಬಗ್ಗೆ ತನಿಖೆ ಮಾಡಲು ಒಂದು ನ್ಯಾಯಾಂಗ ಸಮಿತಿಯನ್ನು ನೇಮಕ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಏನಾದರೂ ಸಜೆಷನ್ ಕೊಟ್ಟಿದ್ದೀರಾ?

ಶ್ರೀ ವೀರೇಂದ್ರಪಾಟೀಲ್ :—ನಮ್ಮ ಸರ್ಕಾರದ ಮಟ್ಟಿಗೆ ಮಾತ್ರ ನಾನು ಹೇಳುತ್ತೇನೆ. ಕೇಂದ್ರ ಸರ್ಕಾರದ ಬಗ್ಗೆ ಹೇಳುವುದಕ್ಕೆ ನಾನು ಅರ್ಹನಲ್ಲ. ನಮ್ಮ ರಾಜ್ಯದಲ್ಲಿ ಕೋಮುವಾರು ಗಲಭೆ ಬಗ್ಗೆ ಯಾರು ಕಾರಣಕರ್ತರಾಗುತ್ತಾರೋ ಅವರಿಗೆ ಕಾನೂನು ಪ್ರಕಾರ ಏನು ಶಿಕ್ಷೆ ಕೊಡಬಹುದೋ ಅದನ್ನು ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ರಾಷ್ಟ್ರದ್ರೋಹ ಶಕ್ತಿಗಳು ಏನಾದರೂ ಬೆಳೆದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುವವರು ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನವರು. ಈ ಬಗ್ಗೆ ಕೇಂದ್ರ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಂತೆ ಕಾಣುತ್ತದೆ. ಈ ವಿಚಾರದಲ್ಲಿ ನಮಗೆ ಇದುವರೆಗೆ ಏನೂ ತಿಳಿದು ಬಂದಿಲ್ಲ.

ಶ್ರೀ ವಿ. ಎನ್. ಪಾಟೀಲ್ :—ಯಾರು ರಾಷ್ಟ್ರಘಾತುಕತನ ಮಾಡುತ್ತಾರೋ ಯಾರು ಜಾತಿಯನ್ನು ವಿರುದ್ಧವಾಗಿ ಕೆಲಸಮಾಡುತ್ತಾರೋ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವವರು ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನವರು ನಾವಲ್ಲ ಎಂದು ಹೇಳಿದಿರಿ. Is it not abdication of the responsibility vested in the head of the administration? ಮೆಜಾರಿಟಿ ಕೋಮಿನವರು ಮೈನಾರಿಟಿ ಕೋಮಿನವರನ್ನು ಹೆದರಿಸಿ ಗಲಾಟೆಯುಂಟುಮಾಡಿದಾಗ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಮುಖ್ಯ ಮಂತ್ರಿಗಳ ಕರ್ತವ್ಯವಲ್ಲವೇ?

ಶ್ರೀ ವೀರೇಂದ್ರಪಾಟೀಲ್ :—ರಾಷ್ಟ್ರದ್ರೋಹ ಶಕ್ತಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದು ನನ ಕೆಲಸವಲ್ಲ ಎಂದು ನಾನು ಹೇಳಲಿಲ್ಲ. ಸಮಾಜದಲ್ಲಿ ಒಂದು ಮತದ ವಿರುದ್ಧ ಮತ್ತೊಂದು ಮತದವರು ಗಲಾಟೆಯುಂಟುಮಾಡಿ ಜಗಳ ಮಾಡಿದರೆ, ಅದು ಯಾರೇ ಮಾಡಿರಲಿ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ರಾಷ್ಟ್ರದ್ರೋಹ ಮತ್ತು ಸಮಾಜ ಘಾತುಕತನವನ್ನು ಯಾವ ಪಕ್ಷದವರೇ ಮಾಡಲಿ, ಅವರ ಬಗ್ಗೆ ಕ್ರಮ ಕೈಕೊಳ್ಳುತ್ತೇವೆ ಮತ್ತು ಗಲಭೆಯನ್ನು ಹತ್ತಿಕ್ಕುತ್ತೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ :—ಮುಸ್ಲೀಮು ಲೀಗ್‌ನವರು ಗಲಾಟೆ ಮಾಡಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್ : – ದೇಶದಲ್ಲಿ ವಿವಿಧ ಕೋಮುಗಳ ಮಧ್ಯೆ ಸಾಮರಸ್ಯ ಇರಬೇಕು, ಆದಕ್ಕಾಗಿ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಎಂಬುದಾಗಿ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕಂಥ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನವರು ಯಾವತ್ತೂ ಸಭೆ ಸೇರಿ ತಮ್ಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿಲ್ಲ ಈ ಕೋಮುವಾರು ಪೀಡೆಯ ಬಗ್ಗೆ ಕೇಂದ್ರ ಸರ್ಕಾರದವರು ಏನು ಒಂದು ಸುತ್ತೋಲೆ ಹಾಗೂ ತಿಳಿವಳಿಕೆಗಳನ್ನು ಕಳಿಸಿದ್ದಾರೆ ಅದಕ್ಕೆ ವಿರುದ್ಧವಾಗಿ ಈ ಕೌನ್ಸಿಲ್‌ನವರು ನಡೆದುಕೊಳ್ಳುತ್ತಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲವಲ್ಲವೇ?

ಶ್ರೀ ವೀರೇಂದ್ರಪಾಟೀಲ್:–ಮಾನ್ಯ ಸದಸ್ಯರು ತಮ್ಮ ಪ್ರಶ್ನೆಗೆ ತಾವೇ ಉತ್ತರ ಕೊಟ್ಟುಕೊಂಡಿದ್ದಾರೆ ರಾಜ್ಯಮಟ್ಟದಲ್ಲಿ ಸಭೆ ಸೇರಿಲ್ಲ ಎಂದು ಹೇಳುತ್ತಾರೆ ಮತ್ತು ಕೇಂದ್ರ ಸರ್ಕಾರದವರ ಆದೇಶಕ್ಕೆ ವಿರುದ್ಧವಾಗಿ ವರ್ತಿಸಿದ್ದಾರೆಂದು ಕೂಡ ಹೇಳುತ್ತಾರೆ. ಅವರು ಸಭೆಯೇ ಸೇರದಿದ್ದ ಮೇಲೆ ಕೇಂದ್ರ ಸರ್ಕಾರದ ಆದೇಶದ ವಿರುದ್ಧ ವರ್ತಿಸುವುದಕ್ಕೆ ಸಾಧ್ಯವೇ ಇಲ್ಲ.ನ್ಯಾಷನಲ್ ಇಂಟಿಗ್ರೇಷನ್‌ಕೌನ್ಸಿಲ್‌ನವರು ಎಷ್ಟು ಸಲ ಮೀಟಿಂಗ್ ಸೇರಿದ್ದಾರೆಂಬ ವಿವರ ನನ್ನ ಹತ್ತಿರ ಇಲ್ಲ. ಒಂದು ವಿಚಾರ ಹೇಳುತ್ತೇನೆ. ಏನೆಂದರೆ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್‌ನವರು ಮೀಟಿಂಗ್ ಮಾಡುವುದು ಮತ್ತು ಭಾಷಣ ಮಾಡುವುದು ಮುಖ್ಯವಲ್ಲ, ಜಾತಿ ಮತಗಳ ಮಧ್ಯೆ ಸಾಮರಸ್ಯವನ್ನುಂಟುಮಾಡುವುದು ಮುಖ್ಯ ಈ ಬಗ್ಗೆ ನಮ್ಮ ಸರ್ಕಾರ ಏನೇನು ಮಾಡಬೇಕೋ ಅದನ್ನು ಮಾಡುತ್ತಿದೆ ಸುದೈವದಿಂದ ಅನೇಕ ರಾಜ್ಯಗಳಲ್ಲಿ ನಡೆಯುತ್ತಿರುವಂತೆ ಜಾತಿಯ ಗಲಭೆಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಿಲ್ಲ ಪರಿಸ್ಥಿತಿ ಒಳ್ಳೆಯ ರೀತಿಯಲ್ಲಿ ಇದೆ ಈ ವಿಚಾರದಲ್ಲಿ ನಾವು ಸುದೈವಿಗಳಾಗಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪ : ನಮ್ಮ ರಾಜ್ಯದಲ್ಲಿ ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಯಾವಾಗ ಕಾನ್ಸ್‌ಟಿಟ್ಯೂಟ್ ಆಯಿತು, ಅದರಲ್ಲಿ ಯಾವ ಸದಸ್ಯರಿದ್ದಾರೆಂಬುದನ್ನು ಹೇಳುತ್ತೀರಾ.

ಶ್ರೀ ವೀರೇಂದ್ರಪಾಟೀಲ್ :—ಆ ವಿವರ ಇಲ್ಲ. ಆ ವಿವರ ಮಾನ್ಯ ಸದಸ್ಯರಿಗೆ ಬೇಕಾದರೆ ಅವರು ಪ್ರತ್ಯೇಕವಾಗಿ ಪ್ರಶ್ನೆ ಹಾಕಬೇಕು.

SRI H. SIDDAVEERAPPA :—Is there National Integration Council for the State and if so, when is it constituted and who are the members?

SRI VEERENDRA PATIL :—If a separate question is put, I can get the information?

SRI H. N. NANJE GOWDA :—The other day the Deputy Minister gave the opinion that the RSS is a political organisation. Do you share that view.

SRI VEERENDRA PATIL :—I do not know what the Deputy Minister has said. Unless I verify it, how can I say anything?

ಶ್ರೀ ಎಂ. ನಾಗಪ್ಪ :— ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಉತ್ತರ ಹೇಳುತ್ತಾ ಬೇರೆ ರಾಜ್ಯಗಳಲ್ಲಿ ಬಹಳ ಹೆಚ್ಚಾಗಿ ಕೋಮುವಾರು ಗಲಭೆಗಳಾಗುತ್ತವೆ ನಮ್ಮ ರಾಜ್ಯದಲ್ಲಿ ಅಂತಹ ಗಲಭೆಗಳು ಆಗುತ್ತಿಲ್ಲ ಎಂದು ಹೇಳಿದರು. ಸುಮಾರು ನಾಲ್ಕೈದು ವರ್ಷಗಳಿಂದಲೂ ಪ್ರತಿ ವರ್ಷವೂ ಒಂದಲ್ಲ ಒಂದು ಮೂಲೆಯಲ್ಲಿ ಕೋಮುವಾರು ಗಲಭೆಗಳು ಆಗುತ್ತಲೇ ಇವೆ. ಇದು ಸರಕಾರದ ಗಮನಕ್ಕೆ ಬಂದಿಲ್ಲವೆ? ಸರಕಾರದ ದೃಷ್ಟಿಯಲ್ಲಿ ೬೦೦–೭೦೦ ಜನರು ಸತ್ತರು ಎಂದರೆ ಅದು ಕೋಮುವಾರು ಗಲಭೆ ಎಂದು ಭಾವಿಸುತ್ತಾರೆಯೇ ಹೇಗೆ ಇದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲವೇ

ಶ್ರೀ ವೀರೇಂದ್ರಪಾಟೀಲ್ :—ನಮ್ಮಲ್ಲಿ ಕೋಮುವಾರು ಗಲಭೆಗಳು ಆಗಲಿಲ್ಲ ಎಂದು ಹೇಳಲಿಲ್ಲ. ಮಾನ್ಯ ಸದಸ್ಯರು ನಾನು ಹೇಳಿರುವುದನ್ನು ಸರಿಯಾಗಿ ತಿಳಿಯಲಿಲ್ಲ ಎಂದು ತೋರುತ್ತೆ. ಕೆಲವು ರಾಜ್ಯಗಳಲ್ಲಿ ಏನು ಗಲಭೆಗಳಾದುವು ಅದಷ್ಟು ಮಟ್ಟಿಗೆ ಹೆಚ್ಚು ಗಲಭೆಗಳು ನಮ್ಮ ದೇಶದಲ್ಲಿ ಆಗಿಲ್ಲ ಮತ್ತು ಸುದೈವದಿಂದ ನಮ್ಮ ರಾಜ್ಯದ ಜನರು ಬಹಳ ಸಂಯಮದಿಂದ ಇದ್ದಾರೆ ಎಂದು ಹೇಳಿದೆ. ಆದರೆ ಇದರಲ್ಲಿ ಕೋಮುವಾರು ಗಲಭೆಗಳಾದಾಗ ಸರಕಾರ ಸಾಕಷ್ಟು ಎಚ್ಚರಿಕೆ ವಹಿಸಿ ಕೆಲಸ ಮಾಡಲು ಎಲ್ಲ ಸಿದ್ಧತೆಗಳನ್ನೂ ಇಟ್ಟುಕೊಂಡಿದೆ. ಈಚೆಗೆ ಚಾಮರಾಜನಗರದಲ್ಲಿ ಗಲಭೆಯಾದಾಗ ನಮ್ಮ ಇಲಾಖೆಯವರು ತಕ್ಷಣ ಹೋಗಿ ಅಲ್ಲಿನ ಗಲಭೆಯನ್ನು ಹತೋಟಿಗೆ ತಂದಿದ್ದಾರೆ. ಕೋಮುವಾರು ಗಲಭೆಗಳು ಎಲ್ಲೆಲ್ಲಿ ಆಗಬಹುದು ಇದರ ಬಗ್ಗೆ ಯಾವ ರೀತಿಯಾದ ಕ್ರಮ ತೆಗೆದುಕೊಳ್ಳಬೇಕೋ ಅದಕ್ಕೆ ಎಲ್ಲ ವ್ಯವಸ್ಥೆಗಳನ್ನೂ ಮಾಡಿಕೊಂಡಿದ್ದೇವೆ. ನಾವು ಏನೇನು ಮಾಡಿಕೊಂಡಿದ್ದೇವೆ ಎನ್ನುವುದನ್ನು ಇಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ಸರಕಾರ ಮುಂದಾಲೋಚನೆಯಿಂದ ಯೋಚನೆ ಮಾಡಬೇಕಾಗುತ್ತದೆ. ಸರಕಾರದ ದೃಷ್ಟಿಯಿಂದ ಕೋಮುವಾರು ಗಲಭೆಗಳಾದಾಗ ಅದನ್ನು ತಡೆಯಲು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

Questions for Answers on the day
(But not Taken up)
Sud-Recistrars office AT. K. G. F.

28. SRI S. R. SHANMUGAM (K. G. F.) Will the Minister for Revenue be pleased to state :—

(*a*) the reasons for not opening a Sub-Registrar's Office at K.G.F when other towns with lesser population, are having such offices

(*b*) whether there is any proposal now before Government to open a Sub-Registrar's Office at K. G. F., if so, the period within which the said Office would be opened ?

SRI H. V. KOUJALGI (Minister For Revenue) :—

(*a*) Opening of a Sub-Registrar's Office is not based entirely on population of the town.

(*b*) Yes. The proposal has just been received and is under examination. It is not possible to indicate any definite date.

SUB-LEASE OF MINING AREAS BY THE MYSORE MINERALS LTD.

283. SRI B. SATHYANARAYAN SINGH (Hospet).—Will the Minister for Industries. Information and Publicity be pleased to state.-

(*a*) whether it is the policy of the Mysore Minerals Ltd., to sub lease mining areas, held by them on royalty basis.

(*b*) if so whether this policy decision has been given publicity to afford a chance to all the parties interested in this field.